**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ನ್ಯಾಯಾಲಯ,ಹೊಸದುರ್ಗ.**

ಅಸಲು ದಾವಾ ಸಂಖ್ಯೆ **83/2020** ದಿನಾಂಕಃ **23-06-2025**

ಪಿ.ಡಬ್ಲ್ಯೂಃ **1**

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ **1** ರಿಂದ **5** ನೇ ಪ್ರತಿವಾದಿಯರ ಪರ ಶ್ರೀ ಜಿ.ಬಿ ವಕೀಲರಿಂದ

ಸರ್ವೇ ನಂ. 18 ರಲ್ಲಿ ನನಗೆ ಮೋಸವಾಗಿದ್ದು 30 ಎಕರೆ 12 ಗುಂಟೆ ಪೈಕಿ 15 ಎಕರೆ 6 ಗುಂಟೆ ನನಗೆ ಬರಬೇಕೆಂದು ಕೋರಿ ಈ ದಾವೆ ಸಲ್ಲಿಸಿರುತ್ತೇನೆ. ನನ್ನ ತಂದೆಯ ಅಜ್ಜಂದಿರ ಹೆಸರು ಪರಪ್ಪ ಶೆಟ್ಟಿ ಮತ್ತು ಲಿಂಗಾಶೆಟ್ಟಿ. ಸದರಿ ಅಜ್ಜಂದಿರಿಗೆ ಚನ್ನಬಸಮ್ಮ ಎಂಬ ಸಹೋದರಿ ಇದ್ದಳು ಎಂದರೆ ಸರಿ . ಪರಪ್ಪ ಶೆಟ್ಟಿ ಮತ್ತು ನಿಂಗಾಶೆಟ್ಟಿ ರವರ ತಂದೆಯ ಹೆಸರು ಸಣ್ಣ ಮರುಳಪ್ಪ. ದಾವಾ ಸ್ವತ್ತುಗಳು ಸಣ್ಣ ಮರುಳಪ್ಪ ರವರಿಂದ ಪರಪ್ಪ ಶೆಟ್ಟಿ ಮತ್ತು ಲಿಂಗಾಶೆಟ್ಟಿ ರವರಿಗೆ ಬಂದಂತಹ ಆಸ್ತಿಗಳು ಎಂದರೆ ಸರಿ. ಚನ್ನಬಸಮ್ಮ ರವರನ್ನು ಗುಬ್ಬಿ ತಾಲ್ಲೂಕಿನ ಆಗಲವಾಡಿ ಗ್ರಾಮಕ್ಕೆ ಕೊಟ್ಟು ವಿವಾಹ ಮಾಡಲಾಗಿತ್ತು. ಚನ್ನಬಸಮ್ಮರ ಗಂಡನ ಹೆಸರು ಗುರುಸಿದ್ದಪ್ಪ.

2. ಸದರಿ ಗುರುಸಿದ್ದಪ್ಪರವರಿಗೆ 06.08.1952 ರಂದು ಸಣ್ಣ ಮರುಳಪ್ಪ ರವರು 13 ಎಕರೆ ಜಮೀನನ್ನು ದಾನಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿ, ಸಾಕ್ಷಿ ಅದು ನೊಂದಾವಣೆ ಮಾಡಿರಲಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಸದರಿ ದಾನಪತ್ರದ ಆಧಾರದ ಮೇರೆಗೆ ಗುರುಸಿದ್ದಪ್ಪ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ. ಅದೇ ರೀತಿ ಪರಪ್ಪ ಶೆಟ್ಟಿ ಮತ್ತು ನಿಂಗಾಶೆಟ್ಟಿರವರಿಗೆ ತಲಾ 7 ಎಕರೆ 20 ಗುಂಟೆ ಜಮೀನು ನೀಡಿದ್ದರು ಎಂದರೆ ಸಾಕ್ಷಿಯು ತಮಗೆ 10 ಎಕರೆ 4 ಗುಂಟೆ , ಲಿಂಗಾಶೆಟ್ಟಿ ರವರಿಗೆ 10 ಎಕರೆ 4 ಗುಂಟೆ ನೀಡಲಾಗಿತ್ತು ಎಂದು ಉತ್ತರಿಸುತ್ತಾರೆ. ಈ ರೀತಿ ತಲಾ 10 ಎಕರೆ 4 ಗುಂಟೆ ಜಮೀನು ನೀಡಿದ ಬಗ್ಗೆ ದಾಖಲಾತಿಗಳನ್ನು ಹಾಜರು ಮಾಡಿರುತ್ತೇನೆ.

3. ನಿಂಗಾಶೆಟ್ಟಿ ತನ್ನ ಪಾಲಿಗೆ ಬಂದ 7 ಎಕರೆ 20 ಗುಂಟೆ ಜಮೀನಿನಲ್ಲಿ 1 ರಿಂದ 3 ನೇ ಪ್ರತಿವಾದಿಯರು ವಿಭಾಗ ಮಾಡಿಕೊಂಡು ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿ, ಸಾಕ್ಷಿ ಪುನಃ ಅದು 10 ಎಕರೆ 4 ಗುಂಟೆ ಎಂದು ನುಡಿಯುತ್ತಾರೆ. ನಿಪಿ-14 ರ ಪಹಣಿ ಪತ್ರಿಕೆ ಪ್ರಕಾರ 1 ರಿಂದ 3 ನೇ ಪ್ರತಿವಾದಿಯ ಹೆಸರಿಗೆ ಜಂಟಿಯಾಗಿ 7 ಎಕರೆ 20 ಗುಂಟೆ ದಾಖಲಾಗಿರುತ್ತದೆ ಎಂದರೆ ಸರಿ. ಅದೇ ರೀತಿ ಸಿದ್ದರಾಮಯ್ಯ ಬಿನ್ ಗುರುಸಿದ್ದಯ್ಯ ರವರ ಹೆಸರಿನಲ್ಲಿ 15 ಎಕರೆ ದಾಖಲಾಗಿರುತ್ತದೆ ಎಂದರೆ ಸರಿ, ಸಾಕ್ಷಿ ಅದು ತಪ್ಪಾಗಿ ನಮೂದಾಗಿರುತ್ತದೆ ಎಂದು ಸ್ವತಃ ನುಡಿಯುತ್ತಾರೆ. ನನ್ನ ತಂದೆ ಕರಿಬಸಪ್ಪ ಹೆಸರಿನಲ್ಲಿ 7 ಎಕರೆ 20 ಗುಂಟೆ ಜಮೀನು ದಾಖಲಾಗಿರುತ್ತದೆ ಎಂದರೆ ಸರಿ, ಸಾಕ್ಷಿ ಅದು ತಪ್ಪಾಗಿ ನಮೂದಾಗಿರುತ್ತದೆ ಎಂದು ಸ್ವತಃ ನುಡಿಯುತ್ತಾರೆ. ನನ್ನ ತಂದೆ ಕರಿಬಸಪ್ಪನಿಗೆ ನಾನು ಮತ್ತು 1 ನೇ ವಾದಿ ಇಬ್ಬರು ಮಕ್ಕಳು. ನಾನು ಮತ್ತು 1 ನೇ ವಾದಿ ಕೆಲವು ಜಮೀನುಗಳಲ್ಲಿ ವಿಭಾಗ ಮಾಡಿಕೊಂಡು ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿ. ಅದೇ ರೀತಿ ಕೆಲವು ಜಮೀನುಗಳನ್ನು 1 ನೇ ವಾದಿ ಮಾರಾಟ ಮಾಡಿರುತ್ತಾರೆ, ನಾನು ಮಾರಾಟ ಮಾಡಿರುವುದಿಲ್ಲ.

4. ಸಿದ್ದರಾಮಯ್ಯರವರು ತನ್ನ ಪಾಲಿಗೆ ಬಂದಿದ್ದ 15 ಎಕರೆ ಜಮೀನನ್ನು ದಿಃ 02.12.1990 ರಂದು 1 ರಿಂದ 3 ನೇ ಪ್ರತಿವಾದಿಗೆ ನೊಂದಾಯಿತ ಮರಣ ಶಾಸನ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮರಣ ಶಾಸನದ ಮೇರೆಗೆ 1 ರಿಂದ 3 ನೇ ಪ್ರತಿವಾದಿ ಹೆಸರಿಗೆ ಖಾತೆ ಬದಲವಾಣೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ತನ್ನ ಗಮನಕ್ಕೆ ಬಾರದೇ ಮಾಡಿಕೊಂಡಿರುತ್ತಾರೆ ಎಂದು ಸ್ವತಃ ನುಡಿಯುತ್ತಾರೆ.

5. ಗುರುಸಿದ್ದಯ್ಯ ಹೆಸರಿಗೆ ಆದ ದಾನ ಪತ್ರ ಹಾಗೂ 1 ರಿಂದ 3 ನೇ ಪ್ರತಿವಾದಿಯರಿಗೆ ಆದ ಮರಣ ಶಾಸನವನ್ನು ಪ್ರಶ್ನಿಸಿ ಕಂದಾಯ ಅಧಿಕಾರಿಗಳಲ್ಲಿ ಪ್ರಕರಣ ದಾಖಲಿಸಿದ್ದೇವು. ಅದಕ್ಕೆ ಸಂಬಂದಿಸಿದಂತೆ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ .

**ವಕೀಲರು ಮುಂದುವರೆದ** ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.